ದಿನಾಂಕಃ 30.01.2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ.ಬಿಎಸ್‌ಡಿ ವಕೀಲರಿಂದ ಅರ್ಜಿದಾರರ ಪರವಾಗಿ.

ನನ್ನ ಮುಖ್ಯವಿಚಾರಣೆಯಾಗಿ ಹಾಜರುಪಡಿಸಿರುವ ಪ್ರಮಾಣಪತ್ರದಲ್ಲಿ ಬರೆಯಲಾಗಿರುವ ಅಂಶಗಳು ನನಗೆ ತಿಳಿದಿದ್ದು ಸತ್ಯಾಂಶಗಳಿಂದ ಕೂಡಿರುತ್ತವೆ.

ಸುಂದರಮ್ಮ ಎನ್ನುವ ರೋಗಿಗೆ ಸಂಬಂದಪಟ್ಟ ಒಂದು ಹೊರೆರೋಗಿ ಚೀಟಿ ಹಾಗೂ ಆಸ್ಪತ್ರೆಯ ಒಳರೋಗಿಯ ದಾಖಲೆಗಳನ್ನು ಮತ್ತು ಒಂದು ಕ್ಷ-ಕಿರಣವನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿಃ24 ರಿಂದ 26 ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಶ್ರೀ.ಕೆಎಸ್ ವಕೀಲರಿಂದ ಎದುರುದಾರರ ಪರವಾಗಿ.

ಅರ್ಜಿದಾರರು ಬೇರೆ ಆಸ್ಪತ್ರೆಯಿಂದ ನಮ್ಮ ಕಿಮ್ಸ್ ಆಸ್ಪತ್ರೆಗೆ ಬಂದಿರುತ್ತಾರೆ ಎಂದರೆ ಸರಿ. ಬೇರೆ ಆಸ್ಪತ್ರೆಯಿದ ಕಳುಹಿಸಿರುವ ಕುರಿತಂತೆ ಯಾವುದೇ ಪತ್ರವನ್ನು ಹಾಜರುಪಡಿಸಿರುವುದಿಲ್ಲ. ಅರ್ಜಿದಾರರಿಗೆ ಬೇರೆ ಆಸ್ಪತ್ರೆಯಲ್ಲಿ ಏನು ಚಿಕಿತ್ಸೆ ಕೊಟ್ಟಿರುತ್ತಾರೆ ಎನ್ನುವ ಬಗ್ಗೆ ಮಾಹಿತಿ ಇರುತ್ತದೆ ಆದರೆ ಏನೇನು ಪರೀಕ್ಷೆ ಮಾಡಿಸಿರುತ್ತಾರೆ ಎನ್ನುವ ಬಗ್ಗೆ ನಮಗೆ ಮಾಹಿತಿ ಇರುವುದಿಲ್ಲ. ಅರ್ಜಿದಾರರು ಕಿಮ್ಸ್ ಆಸ್ಪತ್ರೆಗೆ ದಿಃ04.10.2017ರಂದು ದಾಖಲಾಗಿರುತ್ತಾರೆ. ಅರ್ಜಿದಾರರು ನಮ್ಮ ಆಸ್ಪತ್ರೆಗೆ ಬರುವುದಕ್ಕಿಂತ ಪೂರ್ವದಲ್ಲಿ ಮಂಡ್ಯ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದು ಅಲ್ಲಿ ಎಮ್‌ಎಲ್‌ಸಿ ದಾಖಲೆ ಮಾಡಿಕೊಳ್ಳಲಾಗಿರುತ್ತದೆ ಎಂದರೆ ಸರಿ. ನನ್ನ ಸಾಕ್ಷ್ಯದ ಪ್ರಮಾಣಪತ್ರದಲ್ಲಿ ಹೇಳಿರುವಂತೆ ಗಾಯಗಳು ಅರ್ಜಿದಾರರಿಗೆ ಆಗಿರಲಿಲ್ಲ ಎಂದರೆ ಸರಿಯಲ್ಲ. ಕಿಮ್ಸ್ ಆಸ್ಪತ್ರೆಗೆ ದಾಖಲು ಮಾಡಿಕೊಳ್ಳುವಾಗ ನಾನೇ ಅರ್ಜಿದಾರನ್ನು ಪರೀಕ್ಷೆ ಮಾಡಿ ದಾಖಲು ಮಾಡುವಂತೆ ಹೇಳಿರುತ್ತೇನೆ. ಕಿಮ್ಸ್ ಆಸ್ಪತ್ರೆಯಿಂದ ಪೋಲೀಸ್ ಠಾಣೆಗೆ ಮಾಹಿತಿಯನ್ನು ಕೊಟ್ಟಿರುವುದಿಲ್ಲ. ಆಸ್ಪತ್ರೆಯ ದಾಖಲೆಗಳಲ್ಲಿ ಗಾಯಾಳುವಿನ ಕಡೆಯವರು ಏನು ಹೇಳಿರುತ್ತಾರೆ ಅದನ್ನು ನಮೂದು ಮಾಡಿಕೊಳ್ಳಲಾಗುತ್ತದೆ. ನಮ್ಮ ಆಸ್ಪತ್ರೆಗೆ ಅರ್ಜಿದಾರರು ಬಂದಾಗ ಅವರಿಗೆ ಪ್ರಜ್ಞೆ ಇತ್ತು. ಅರ್ಜಿದಾರರಿಗೆ ಗಾಯ ಹೇಗೆ ಆಗಿತ್ತು ಎನ್ನುವ ಕುರಿತಂತೆ ಆಸ್ಪತ್ರೆಯಲ್ಲಿ ಮಾಹಿತಿ ಕೊಟ್ಟಿರುತ್ತಾರೆ. ಅರ್ಜಿದಾರರಿಗೆ ನಾನೇ ಚಿಕಿತ್ಸೆಯನ್ನು ಕೊಟ್ಟಿರುತ್ತೇನೆ. ನಾನು ಕೊನೆಯದಾಗಿ ಪರೀಕ್ಷೆ ಮಾಡಿದಾಗ

ಅರ್ಜಿದಾರರಿಗೆ ಆಗಿದ್ದ ಮೂಳೆ ಮುರಿತಗಳು ಕೂಡಿಕೊಂಡಿರುತ್ತವೆ. ಅರ್ಜಿದಾರರು ನಮ್ಮ ಆಸ್ಪತ್ರೆಯಿಂದ ಬಿಡುಗಡೆ ಆದ ನಂತರ ಮುಂದುವರೆದ ಚಿಕಿತ್ಸೆಗಾಗಿ ಎಷ್ಟು ಬಾರಿ ಆಸ್ಪತ್ರೆಗೆ ಬಂದಿರುತ್ತಾರೆ ಎಂದರೆ ನನಗೆ ನೆನಪಿರುವುದಿಲ್ಲ. ರೋಗಿಯು ಆಸ್ಪತ್ರೆಗೆ ಹೊರರೋಗಿಯಾಗಿ ಬಂದು ಚಿಕಿತ್ಸೆ ಪಡೆದುಕೊಂಡಾಗ ಆ ಕುರಿತಂತೆ ಒಳರೋಗಿ ದಾಖಲೆಗಳಲ್ಲಿ ನಮೂದು ಮಾಡುವುದಿಲ್ಲ. ಪ್ರತಿಬಾರಿ ಚಿಕಿತ್ಸೆಗಾಗಿ ಬಂದಾಗ ಹೊರರೋಗಿ ಚೀಟಿಯನ್ನು ಕೊಡಲಾಗುತ್ತದೆ. ಹೊರರೋಗಿಯಾಗಿ ಚಿಕಿತ್ಸೆ ಪಡೆದುಕೊಳ್ಳಲು ಬಂದಾಗ ಅವರು ಹೇಳಿಕೊಂಡಿರುವಂತಹ ತೊಂದರೆಗಳನ್ನು ನಾನು ನಮೂದು ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಹೊರರೋಗಿ ಚೀಟಿಯಲ್ಲಿ ದಿನಾಂಕ ಮತ್ತು ರೋಗಿಯ ಹೆಸರನ್ನು ನಮೂದು ಮಾಡಲಾಗುತ್ತದೆ ಎಂದರೆ ಸರಿ. ಆಸ್ಪತ್ರೆಯಿಂದ ಬಿಡುಗಡೆ ಆದ ನಂತರ ಮುಂದುವರೆದ ಚಿಕಿತ್ಸೆಯನ್ನು ಪಡೆದುಕೊಂಡಿರುವ ಕುರಿತಂತೆ ದಾಖಲೆಗಳು ನಮ್ಮ ಹತ್ತಿರ ಇರುವುದಿಲ್ಲ ಮತ್ತು ಅವುಗಳನ್ನು ಈಗ ನಾನು ಹಾಜರುಪಡಿಸಿರುವುದಿಲ್ಲ. ನನ್ನ ಸಾಕ್ಷ್ಯದ ಪ್ರಮಾಣಪತ್ರದಲ್ಲಿ ಹೇಳಿಕೊಂಡಿರುವಂತೆ ಅರ್ಜಿದಾರರಿಗೆ ಯಾವುದೇ ತೊಂದರೆಗಳು ಇರುವುದಿಲ್ಲ ಮತ್ತು ಅವರು ಸಹಜವಾಗಿ ಕೆಲಸ ಮಾಡಿಕೊಳ್ಳಲು ಸಮರ್ಥರಾಗಿರುತ್ತಾರೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಂಬಂದಪಟ್ಟಂತೆ ದೈಹಿಕ ನ್ಯೂನತೆಯ ಪ್ರಮಾಣವನ್ನು ನಾನು ಕೇವಲ ಊಹೆ ಮಾಡಿ ಕೊಟ್ಟಿರುತ್ತೇನೆ ಮತ್ತು ಅದಕ್ಕೆ ಯಾವುದೇ ಆಧಾರ ಇರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಂಬಂದಪಟ್ಟಂತೆ ನಾನು ಯಾವುದೇ ನ್ಯೂನತೆಯ ಪ್ರಮಾಣಪತ್ರವನ್ನು ಕೊಟ್ಟಿರುವುದಿಲ್ಲ ಆದರೆ ದೈಹಿಕ ನ್ಯೂನತೆಯ ಪ್ರಮಾಣವನ್ನು ನಿರ್ದರಿಸಿರುತ್ತೇನೆ. ಅರ್ಜಿದಾರರು ಆಸ್ಪತ್ರೆಯಿಂದ ಬಿಡುಗಡೆ ಆಗುವಾಗ ವೈದ್ಯರು ಕೊಟ್ಟಿರುವ ಸಲಹೆಯನ್ನು ಸರಿಯಾಗಿ ಅನುಸರಿಸಿದ್ದರೇ ಅವರಿಗೆ ನ್ಯೂನತೆಯ ಪ್ರಮಾಣವು ಕಡಿಮೆ ಆಗುತ್ತಿತ್ತು ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯದ ಪ್ರಮಾಣಪತ್ರದಲ್ಲಿ ಯಾವ ಕ್ರಮವನ್ನು ಅನುಸರಿಸಿ ನ್ಯೂನತೆಯ ಪ್ರಮಾಣವನ್ನು ನಿರ್ದರಿಸಲಾಗಿರುತ್ತದೆ ಎನ್ನುವುದನ್ನು ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಆಗಿರುವಂತಹ ನ್ಯೂನತೆಗಳು ಅವರ ವಯೋ ಕಾರಣದಿಂದ ಆಗಿದ್ದು ಯಾವುದೇ ಅಪಘಾತದಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯದ ಪ್ರಮಾಣಪತ್ರದಲ್ಲಿ ಹೇಳಿಕೊಂಡಿರುವಂತೆ ಅರ್ಜಿದಾರರ ಮುಂದುವರೆದ ಶಸ್ತ್ರಚಿಕಿತ್ಸೆಗಾಗಿ ಎರಡೂವರೆ

ಲಕ್ಷಗಳ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿಯಲ್ಲ. ಮುಂದುವರೆದ ಶಸ್ತ್ರಚಿಕಿತ್ಸೆಗಾಗಿ ಆಗುವ ಖರ್ಚಿನ ಕುರಿತಂತೆ ನಾವು ಯಾವುದೇ ಎಸ್ಟಿಮೇಷನ್ ಪತ್ರವನ್ನು ಕೊಟ್ಟಿರುವುದಿಲ್ಲ. ಹೆಚ್ಚಿನ ಪರಿಹಾರ ಸಿಗಲಿ ಎಂದು ದಾಖಲೆಗಳನ್ನು ಸೃಷ್ಟಿಮಾಡಿಕೊಂಡು ಹಾಜರುಪಡಿಸಿ ಅರ್ಜಿದಾರರಿಗೆ ಹೆಚ್ಚಿನ ಪ್ರಮಾಣದ ನ್ಯೂನತೆಯುನ್ನು ತೋರಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿಕೊಂಡಿರುವಂತಹ ನ್ಯೂನತೆಯ ಪ್ರಮಾಣವು ದೈಹಿಕ ನ್ಯೂನತೆಗೆ ಸಂಬಂದಪಟ್ಟಿದ್ದು ಆಗಿರುತ್ತದೆ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ

15ನೇ ಅಪರ ನ್ಯಾಯಾಧೀಶರು
ಮತ್ತು ಎಂಎಸಿಟಿ